ಓ. ಎಸ್. ನಂಃ 188/2014

ಪಿ . ಡಬ್ಲ್ಯೂಃ 1

ದಿಃ10-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ವಿ ಸಿ ಪಿ ಪ್ರತಿವಾದಿ ಪರ ವಕೀಲರಿಂದ ಃ

9 ನೇ ತರಗತಿವರೆಗೆ ಓದಿದ್ದೇನೆ . ಕನ್ನಡ ಓದಲು ಬರೆಯಲು ಬರುತ್ತದೆ . ದಾವೆಯನ್ನು ಗಿರಿಜಮ್ಮ ಮತ್ತು ಈರಣ್ಣಗೌಡ ದೊಡ್ಡಗೌಡರ ಮೇಲೆ ಹಾಕಿದ್ದೇನೆ . ದಾವೆಯನ್ನು ನನ್ನ ತಂದೆಯವರು ಹಾಕಿದ್ದರು. ಈ ದಾವೆಯ ಬಗ್ಗೆ ಮಾಹಿತಿ ಇದೆ ಎಂದರೆ ಸರಿ . ನನ್ನ ತಂದೆಯವರು ಜೀವಂತ ಇದ್ದಾಗ ನಾನು ಈ ಕೆಸನಲ್ಲಿ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ . ನನ್ನ ತಂದೆಯವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬಹುದಿತ್ತು ಎಂದರೆ ಸಾಕ್ಷಿಯು ಅವರು ಅನಾರೋಗ್ಯದಿಂದ ಇದ್ದ ಕಾರಣ ಹೆಳಲು ಆಗಲಿಲ್ಲ . ನಾನು ವ್ಯವಸಾಯ ಮಾಡುತ್ತೇನೆ . 242, 244 ಮತ್ತು ಚಕ್ಕಡಿ ದಾರಿ ಮೇಲೆ ದಾವೆ ಮಾಡಿದ್ದವೆ . 242 ಮತ್ತು 244 ರಲ್ಲಿ ಒತ್ತುವರಿ ಮಾಡಿದ್ದಾರೆ ಎಂದು ಕೇಸ ಮಾಡಿದ್ದೇನೆ . ಒತ್ತುವರಿ ಮಾಡಿದ್ದ ಬಗ್ಗೆ ನನ್ನ ಕೆಸನಲ್ಲಿ ಇಲ್ಲ ಎಂದರೆ ಸರಿಯಲ್ಲ . ಕೇಸ ಹಾಕುವಾಗ 242 ಜಾಗ ಎನಾಗಿತ್ತು ಎಂದರೆ ಪಡಾ ಜಗ ಇತ್ತು . ಕೇಸ ಹಾಕುವಾಗ 244 ಜಾಗ ಎನಾಗಿತ್ತು ಎಂದರೆ ಸಾಕ್ಷಿಯು ಪಡಾ ಜಗ ಇತ್ತು. ಆಸ್ತಿ ನಂಬರ 244 ಉತ್ತರ ದಕ್ಷಿಣ 11 ಮೊಳ ಪೂರ್ವ ಪಶ್ಚಿಮ 32 ಮೊಳ ಇತ್ತು ಅದಕ್ಕೆ ಹಿತ್ತಲು ಇತ್ತು ಅದರ ಉತ್ತರ ದಕ್ಷಿಣ 16 ಮೊಳ ಪೂರ್ವ ಪಶ್ಚಿಮ 44 ಮೊಳ ಇತ್ತು . ಆಸ್ತಿ ನಂಬರ 242 ಉತ್ತರ ದಕ್ಷಿಣ 09 ಮೊಳ ಪೂರ್ವ ಪಶ್ಚಿಮ 28 ಮೊಳ ಇತ್ತು . ಈ ಮೇಲೆ ಹೇಳಿದ ರಿತಿಯಲ್ಲಿ ಅಳತೆಯನ್ನು ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ . ಆಸ್ತಿ ನಂಬರ 244 ರಚಕುಬಂದಿ ಪೂರ್ವಕ್ಕೆ ಸರಕಾರಿ ರಸ್ತೆ , ಪಶ್ಚಿಮಕ್ಕೆ ಮಹಾದೇವಪ್ಪ ಕೊಪ್ಪದ ಅವರ ಆಸ್ತಿ , ಉತ್ತರಕ್ಕೆ ವಾದಿಯವರ ಮತ್ತೊಂದು ಮನೆ , ದಕ್ಷಿಣಕ್ಕೆ ಪ್ರತಿವಾದಿಯವರ ಮನೆ . ಆಸ್ತಿ ನಂಬರ 242 ರ ಚಕುಬಂದಿ ಪೂರ್ವಕ್ಕೆ ಸರಕಾರಿ ರಸ್ತೆ , ಪಶ್ಚಿಮಕ್ಕೆ ಚಕ್ಕಡಿ ದಾರಿ ನಂತರ ಪ್ರತಿವಾದಿಯವರ ಹಿತ್ತಲು , ಉತ್ತರಕ್ಕೆ ಪ್ರತಿವಾದಿಯವರ ಮನೆ , ದಕ್ಷಿಣಕ್ಕೆ ಸರಕಾರಿ ರಸ್ತೆ . ದಾವೆ ಹಾಕುವ ಕಾಲಕ್ಕೆ ಹಾತನಕಾಶೆಯಲ್ಲಿ ತೋರಿಸಿದ ಅಳತೆ ಮತ್ತು ನಾನು ಹೇಳಿದ ಅಳತೆಗೆ

ಹೊಂದಾಣಿಕೆ ಇಲ್ಲ ಎಂದರೆ ಸರಿಯಲ್ಲ . ಹಾತನಕಾಶೆಯಲ್ಲಿ ತೋರಿಸಿದ ರೀತಿ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ .

ಈ ಆಸ್ತಿಯನ್ನು ಯಾರು ಖರೀದಿ ಹಿಡಿದರು ಎಂದರೆ ನನ್ನ ಅಜ್ಜಶಂಕರಗೌಡ ಖರೀದಿ ಹಿಡಿದರು . ಯಾರಿಂದ ಖರೀದಿ ಹಿಡಿದರು ಎಂದರೆ ಲಕ್ಷ್ಮವ್ವ ಹುಡೇದ ಅವರಿಂದ 1941 ರಲ್ಲಿ ಖರಿದಿ ಹಿಡಿದಿದ್ದಾರೆ . 1941 ರಲ್ಲಿ ಖರೀದಿ ಹಿಡಿದ ಪತ್ರವನ್ನು ಹಾಜರುಪಡಿಸಿದ್ದೇನೆ . ಖರೀದಿ ಹಿಡಿಯುವ ಪೂರ್ವದಲ್ಲಿ ದಾವಾ ಆಸ್ತಿ ಎಷ್ಟು ಅಳತೆ ಇತ್ತು ಎಂದು ದಾಖಲೆ ಇದೆಯಾ ಎಂದರೆ ಸಾಕ್ಷಿಯು ಖರಿದಿ ಹಿಡಿಯುವ ಮೊದಲು ಅಳತೆ ಇದ್ದಲ್ಲೇ ಖರೀದಿಗೆ ಕೊಟ್ಟಿರುತ್ತಾರೆ ಎಂದರು . ಹಿರಿಯರು ಖರೀದಿ ಹಿಡಿಯುವ ಪೂರ್ವದಲ್ಲಿ ಅಳತೆ ಇದ್ದ ಬಗ್ಗೆ ಅವರು ತಿಳಿದುಕೊಂಡು ಖರೀದಿ ಹಿಡಿದಿಲ್ಲ ಎಂದರೆ ಸರಿಯಲ್ಲ . 1941 ರ ಪೂರ್ವದ ಆಸ್ತಿ ಅಳತೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಆಗ ನಾನು ಹುಟ್ಟಿರಲಿಲ್ಲ ಅದರ ಬಗ್ಗ ಗೊತ್ತಿರಲಿಲ್ಲ . ನನ್ನ ಜನ್ಮದ ಈಸವಿ 1966 . 1941 ರ ಪೂರ್ವದ ಆಸ್ತಿ ಅಳತೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ . ನಾವು ಖರೀದಿ ಹಿಡಿಯುವ ಪೂರ್ವದಲ್ಲಿ ಆಸ್ತಿ ಇರುವದಕ್ಕಿಂತ ಹೆಚ್ಚು ಅಳತೆ ಸೇರಿಸಿ ಖರೀದಿ ಹಿಡಿದಿದ್ದೇವೆ ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ನಾನು ನೋಡಿದ್ದೇನೆ . ದಾರಿ ಇದ್ದ ಬಗ್ಗ ಖರೀದಿ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಗೆ ಖರೀದಿ ಪತ್ರ/ನಿಪಿ5 ತೋರಿಸಿದ್ದು ಅದರಲ್ಲಿ ದಾರಿ ಇರುವ ಬಗ್ಗ ಕೇಳಲಾಗಿ ಸಾಕ್ಷಿಯು ಅಕ್ಷರಗಳನ್ನು ಗೊತ್ತಾಗುತಿಲ್ಲ ಎಂದು ನುಡಿದರು . ಖರೀದಿ ಹಿಡಿದ ಸ್ಥಳದಲ್ಲಿ ಮನೆ ಕಟ್ಟಿಲ್ಲ ಖುಲ್ಲಾ ಇದೆ . ಖರೀದಿ ಹಿಡಿದ ಖುಲ್ಲಾ ಜಾಗಕ್ಕೆ ಪೂರ್ವ ದಿಕ್ಕಿಗೆ ಸರಕಾರಿ ರಸ್ತೆ ಇದೆ . ಸರಕಾರಿ ರಸ್ತೆಗೆ ಹೊಂದಿಕೊಂಡು ಆಸ್ತಿ ಖರೀದಿಸಿದ್ದೇವೆ ಎಂದರೆ ಸರಿ. ಸರಕಾರಿ ರಸ್ತೆ ಇಂದ ನಮ್ಮ ಆಸ್ತಿಗೆ ಅಡ್ಡಾಡುತ್ತೇವೆ ಪ್ರತಿವಾದಿಯವರ ಆಸ್ತಿ ಇಂದ ಅಡ್ಡಾಡುವುದಿಲ್ಲ . ಪ್ರತಿವಾದಿಯವರು ಅವರ ಜಾಗದಲ್ಲಿ ಮನೆ ಕಟ್ಟಿಸಿಕೊಂಡು ಅಲ್ಲಿಯೇ ವಾಸ ಇದ್ದಾರೆ ಎಂದರೆ ಸರಿ . ದಾವೆಯನ್ನು 2014 ರಲ್ಲಿ ಹಾಕಿದ್ದೇವೆ . 2014 ರಲ್ಲಿ ದಾವೆ ಮಾಡಲು ಯಾವುದೇ ಕಾರಣ ಉಂಟಾಗಿಲ್ಲ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ . ಪ್ರತಿವಾದಿಯವರು ನಮ್ಮ ಜಾಗ ಒತ್ತುವರಿ ಮಾಡಿದ ಕಾರಣ ದಾವೆಯನ್ನುಮಾಡಿದ್ದೇವೆ. ಪ್ರತಿವಾದಿಯವರು ಈ ಕೇಸನಲ್ಲಿ ತಕರಾರು ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ . ಪ್ರತಿವಾದಿಯವರು ಎನು ತಕರಾರು ಸಲ್ಲಿಸಿದ್ದಾರೆ ಮತ್ತು ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನನಗೆ ವಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ನಮ್ಮ

ಮನೆಯಲ್ಲಿ ಎತ್ತು ,ಚಕ್ಕಡಿ , ಟ್ರಾಕ್ಟರ ಇಲ್ಲ ಎಂದರೆ ಸರಿ . ಪ್ರತಿವಾದಿಯವರು ನಮ್ಮ ಜಾಗೆಯಲ್ಲಿ ಒತ್ತುವರಿ ವಾಡಿ ಬುನಾದಿ ತೆಗೆಯುತಿದ್ದಾರೆ ಎಂದು ದಾವೆ ಮಾಡಿದ್ದೆವೆ ಎಂದರೆ ಸರಿ. ಪ್ರತಿವಾದಿಯವರ ಹಳೇ ಮನೆ ಇತ್ತು ಅದು ಬಿದ್ದ ನಂತರ ಅವರು ಹೊಸ ಮನೆ ಕಟ್ಟುತಿದ್ದರು ಎಂದರೆ ಸಾಕ್ಷಿ ನಮ್ಮ ಜಾಗ ಒತ್ತುವರಿ ಮಾಡಿ ಕಟ್ಟುತಿದ್ದರು . ಮನೆ ಬಿದ್ದ ಕಾರಣ ಪಂಚಾಯಿತಿ ಇಂದ ಪರಿಹಾರ ಮಂಜೂರು ಆಗಿತ್ತು ಎಂದರೆ ಗೊತ್ತಿಲ್ಲ . ಸರಕಾರದಿಂದ ಸಹಾಯ ದನ ಪಡೆದು ಬಿದ್ದ ಮನೆ ಜಾಗದಲ್ಲಿ ಹೊಸ ಮನೆ ಕಟ್ಟಿ ವಾಸ ಇದ್ದಾರೆ ಎಂದರೆ ಸರಿ. ನಾನು ನನ್ನ ಆಸ್ತಿ ಉತಾರವನ್ನು ಹಾಜರುಪಡಿಸಿದ್ದೆನೆ . ನನ್ನ ಉತಾರದಲ್ಲಿ ದಾವಾ ಆಸ್ತಿ ಅಳತೆ ಇಲ್ಲ ಎಂದರೆ ಸರಿ . ಖರೀದಿ ಪತ್ರ ಮತ್ತು ಉತಾರಗಳನ್ನು ಹೊರತುಪಡಿಸಿ ದಾವಾ ಆಸ್ತಿ ಅಳತೆ ಬಗ್ಗೆ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನಗೆ ತಿಳಿದಿಲ್ಲ ಎಂದರು. ಬೇರೆ ದಾಖಲೆಗಳನ್ನು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಖರೀದಿ ಕಾಗದದಲ್ಲಿ ಅಳತೆ ನಮೂದು ಆಗಿದ್ದು ಅದರಂತೆ ಮುಂದುವರೆಯುತ್ತದೆ . ನನಗೆ ಖರೀದಿ ಕೊಟ್ಟವರು ಮತ್ತು ಖರೀದಿ ಹಿಡಿದವರು ಅವರ ಪ್ರಕಾರ ಸುಳ್ಳು ಅಳತೆ ನಮೂದಿಸಿದ್ದಾರೆ ಎಂದರೆ ಸರಿಯಲ್ಲ .

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟಿಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.